**<u>ದಿನಾಂಕ: 07.09.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು</u>.**

<u>ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ. ವಿ ಎಸ್ ಎ ವಕೀಲರಿಂದ</u>

ಅಪಘಾತ ವಾದ ನನಗೆ ವಯಸ್ಸು 65 ಇತ್ತು ಎಂದರೆ ಸಾಕ್ಷಿ 61 ಇತ್ತು ಎನ್ನುತ್ತಾರೆ. ನಾನು 6 ಎಕರೆ ಜಮೀನು ಹೊಂದಿದ್ದೇನೆ ಅದು ನೀರಾವರಿ ಜಮೀನು ಅಲ್ಲ. ಇವತ್ತಿಗೂ ಸಹ ಸದರಿ ಜಮೀನಿಂದ ಉತ್ಪನ್ನ ಬರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನನಲ್ಲಿ ಏನು ಬೆಳೆದಿಲ್ಲ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ. ಸದರಿ ಜಮೀನಿನಲ್ಲಿ ಬೆಳೆಯುತ್ತಿರುವ ಬೆಳೆ ಬಗ್ಗೆ ಆರ್ ಟಿ ಸಿ ಯಲ್ಲಿ ನಮೂದು ಇದೆ ಎಂದರೆ ಸರಿಯಲ್ಲ. ಈಗಲೂ ಸಹ ನನಗೆ ಅಪಘಾತ ಆಗುವ ಮೊದಲು ಎಷ್ಟು ಉತ್ಪನ್ನ ಬರುತ್ತಿತ್ತೋ ಅಷ್ಟೇ ಉತ್ಪನ್ನ ಸದರಿ ಜಮೀನಿನಿಂದ ಬರುತ್ತಿದ್ದೆ ಎಂದರೆ ಸರಿಯಲ್ಲ.

2. ಸದರಿ ದಿನ ನಾನು ಮೋಟಾರ ಸೈಕಲ್ ಮೇಲೆ ಹೊರಟಿದ್ದೆ ನಾನು ಹಿಂಬದಿ ಸವಾರನಾಗಿದ್ದೆ. ನಾನು ಹೊರಟಿದ್ದ ಮೋಟಾರ ಸೈಕಲ್ ಚಾಲಕ ರಸ್ತೆಯ ತಿರುವಿನಲ್ಲಿ ವೇಗವಾಗಿ ಚಾಲನೆ ಮಾಡಿ ಸದರಿ ಮೋಟಾರ ಸೈಕಲ್ ಸ್ಕಿಡ್ ಆಗಿ ಬಿದ್ದು ಅಪಘಾತ ವಾಗಿರುತ್ತದೆ. ಸದರಿ ಅಪಘಾತದಲ್ಲಿ ನನ್ನ ಎಡಗೈ ಮೂಳೆ ಮುರಿತ ಆಗಿರುತ್ತದೆ. ಅಪಘಾತವಾದ ನಂತರ ಎಸ್ ಡಿ ಎಂ ಆಸ್ಪತ್ರೆಯಲ್ಲಿ 15 ದಿನಗಳ ಕಾಲ ಚಿಕಿತ್ಸೆಯನ್ನು ಪಡೆದಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ನನಗೆ ಸದರಿ ಗಾಯಗಳು ಯಾವ ಕಾರಣದಿಂದ ಆಗಿವೆ ಎಂದು ನಾನು ಹೇಳಿ ಬರೆಯಿಸಿರುತ್ತೇನೆ. ಸದರಿ ಆಸ್ಪತ್ರೆಯವರು ನಾನು ಹೇಳಿದ ನಂತರ ಪೋಲಿಸ್ ಠಾಣೆಗೆ ಮಾಹಿತಿ ನೀಡಿದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಪಂಚಯ್ಯ ರುದ್ರಯ್ಯ ನಂದಿಮಠ ಎಂಬುವವರು ನಮ್ಮ ಗ್ರಾಮದವರು. ಅಪಘಾತಕ್ಕೆ ಸಂಬಧಿಸಿದಂತೆ ದೂರನ್ನು ಅವರೇ ದಾಖಲಿಸಿರುತ್ತಾರೆ.

3. ದಿನಾಂಕ 01.03.2021 ರಂದು ಅಪಘಾತವಾಗಿದ್ದು ದಿನಾಂಕ 07.03.2021 ರಂದು ಸದರಿಯವರು ದೂರು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ದಿನ ಮೋಟಾರ ಸೈಕಲ್ ಮೇಲೆ ಹೋಗಬೇಕಾದರೆ ಅದು ಸ್ಕಿಡ್ ಆಗಿ ಅಪಘಾತ ವಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯು ಉದ್ದೇಶದಿಂದ ನಾನು ಸದರಿ ಪಂಚಯ್ಯ ಹಾಗೂ 1 ನೇ ಎದುರುದಾರ ಮೀಲಾಪೆಯಾಗಿ ಸುಳ್ಳು ದೂರನ್ನು

ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಆದ ಗಾಯಗಳು ಅಪಘಾತದಿಂದಾಗಿ ಆಗಿಲ್ಲ ಎಂದರೆ ಸರಿಯಲ್ಲ. ಸದರಿ ಗಾಯಗಳು ಬೇರೆ ಕಾರಣದಿಂದ ಆಗಿವೆ ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ಎಸ್ ಡಿ ಎಂ ಆಸ್ಪತ್ರೆಯ ಎಂ ಎಲ್ ಸಿ ಪ್ರತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

4. ಎಸ್ ಡಿ ಎಂ ಆಸ್ಪತ್ರೆಯಲ್ಲಿ ನನ್ನ ಎಕ್ಸ ರೇ ಯನ್ನು ತೆಗೆಯಿರುತ್ತಾರೆ. ಸದರಿ ಎಕ್ಸ ರೇಯನ್ನು ನಾನು ಹಾಜರು ಪಡಿಸಿಲ್ಲ ಎಂದರೆ ವೈದ್ಯರು ನೀಡಿರುವುದಿಲ್ಲ ಎನ್ನುತ್ತಾರೆ. ಸದರಿ ಆಸ್ಪತ್ರೆಯಿಂದ ಸದರಿ ಎಕ್ಸ ರೇ ಯನ್ನು ತರಿಸಿಕೊಳ್ಳಲು ತೊಂದರೆ ಇರಲಿಲ್ಲ. ಸದರಿ ಎಕ್ಸ ರೇಯಲ್ಲಿ ನನ್ನ ಮೂಳೆ ಮುರಿತ ಕಂಡು ಬದಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ಸದರಿ ಎಕ್ಸ ರೇಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಆದ ಗಾಯಗಳು ಸಾದಾ ಸ್ವರೂಪದ ಗಾಯಗಳು ಎಂದರೆ ಸರಿಯಲ್ಲ. ನಾನು ಪರಿಹಾರ ಪಡಯುವ ಉದ್ದೇಶದಿಂದ ನಿಪಿ-6 ರಿಂದ 90 ದಾಖಲೆಗಳನ್ನು ನಾನೇ ಸೃಷ್ಟಿಸಿಕೊಂಡು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಹಾಗೂ ಈ ಅರ್ಜಿಯನ್ನು ಉದ್ದೇಶಪೂರ್ವಕವಾಗಿ ವಿಳಂಬ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ 1 ನೇ ಎದುರುದಾರನ ಮೋಟಾರ ಸೈಕಲ್ ಚಾಲಕನ ತಪ್ಪಿನಿಂದ ಆಗದೇ ಇದ್ದರೂ ಸಹ ಆತನನ್ನು ಸೇರಿಸಿ ಸುಳ್ಳು ದೂರು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆದ್ದರಿಂದ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ನ. ಸ. ಓ. ಹೇ. ಕ ಸರಿ ಇದೆ**
**ಎಂದು ಒಪ್ಪಿರುತ್ತಾರೆ.**

**Sd/-**

**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಹಾಗೂ ಜೆ ಎಂ ಎಫ್ ಸಿ ಹಾನಗಲ್**